## ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.

### ಅಪರಾಧ ಪ್ರಕರಣ ಸಂಖ್ಯೆಃ 678/2021

| | | |
|---|---|---|
| **ಸಾಕ್ಷಿಯ ಹೆಸರು** | ಮಾಲಾ ಎನ್. | ಚಾಸಾ-8 |
| **ಉದ್ಯೋಗ** | ರಾಜ್ಯ ಗುಪ್ತ ವಾರ್ತೆ ಐ.ಓ. | ಪ್ರಾಸಾ-4 |
| **ವಾಸ ಸ್ಥಳ** | ಬೆಂಗಳೂರು | |
| **ದಿನಾಂಕಃ 25.06.2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.**

ನಾನು ನವೆಂಬರ್ 2020 ರಿಂದ ಜನವರಿ 2022 ರವರೆಗೆ ನಾನು ಅರಕಲಗೂಡು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿರುತ್ತೇನೆ.

ಚಾಸಾ 2 ರವರು ಚಾಸಾ 1 ರವರು ನೀಡಿದ ಪಿರ್ಯಾದಿಯನ್ನು ತಂದು ನನಗೆ ನೀಡಿರುತ್ತಾರೆ. ಅದನ್ನು ಪಡೆದು ದಿನಾಂಕ 20.01.2021 ರಂದು ರಾತ್ರಿ 9 ಗಂಟೆಗೆ ನಾನು ಪ್ರಕರಣವನ್ನು ದಾಖಲಿಸಿರುತ್ತೇನೆ. ಪ್ರಕರಣವನ್ನು 20ಃ2021 , ಕಲಂ 32 , 34 ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇನೆ. ಸದರಿ ಪ್ರ ವ ವ ವನ್ನು ಸಿಬ್ಬಂದಿಯಾದ ಯೋಗೇಗೌಡ ರವರೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದರಲ್ಲಿ ಸಿಕ್ಕ ಎಂ ಓ ಗಳು 90 Original choice Deluxe Whisky ಒಟ್ಟು 24 ಪ್ಯಾಕೇಟ್ ಗಳು , ಮತ್ತು 180 ಎಂ ಎಲ್ ನ 3 Old Tavern old whisky packets ಗಳನ್ನು ಸಿಕ್ಕಿರುತ್ತವೆ. ಇದರ ಪೈಕಿ ಒಂದೊಂದು ಪ್ಯಾಕ್ ಗಳನ್ನು ಎಫ್ ಎಸ್ ಎಲ್ ವರದಿಗಾಗಿ ಕಳುಹಿಸಿರುತ್ತೇನೆ. ಆರೋಪಿ ಕಲಂ 41(ಎ) ರಡಿಯಲ್ಲಿ ನೋಟೀಸ್ ನೀಡಿ ಅವರನ್ನು ವಿಚಾರಣೆ ಮಾಡಿರುತ್ತೇನೆ. ಮುದ್ದೆಮಾಲುಗಳನ್ನು ಆರ್.ಎಫ್.ಎಸ್.ಎಲ್ ಗೆ ಚಾಸಾ 6 ರವರ ಮುಖಾಂತರ ಪರೀಕ್ಷೆಗೆಂದು ಕಳುಹಿಸಿರುತ್ತೇನೆ. ಸದರಿ ಮಾಲುಗಳನ್ನು ನಮ್ಮ ಬಳಿಯೇ ಉಳಿಸಿಕೊಳ್ಳುತ್ತೇವೆ ಎಂದು ಅಬಕಾರಿ ಇಲಾಖೆಯವರಿಗೆ ಕೋರಿರುತ್ತೇನೆ. ದಾಳಿ ಸಮಯದಲ್ಲಿ ಇದ್ದಂತಹ ಎಲ್ಲಾ ಸಾಕ್ಷಿಗಳ ಹೇಳಿಕೆಗಳನ್ನು ಪಡೆದಿರುತ್ತೇನೆ.

1) ನಿಪಿ2 ರಲ್ಲಿರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅವರ ಸಹಿಯನ್ನು **ನಿಪಿ 2(ಬಿ)** ಎಂದು ಗುರುತಿಸಲಾಯಿತು.

2) ನ್ಯಾಯಾಲಯಕ್ಕೆ ಕಳುಹಿಸಿದ ಸ್ವತ್ತಿನ ಪಟ್ಟಿಯ ದೃಡೀಕೃತ ನಕಲನ್ನು **ನಿಪಿ 4** ಎಂದು ಗುರುತಿಸಲಾಯಿತು.

3) ದಿನಾಂಕ 31.01.2021 ರಂದು ಆರ್ ಎಫ್ ಎಸ್ ಎಲ್ ಗೆ ಮಾಲುಗಳನ್ನು ಪರೀಕ್ಷೆ ಮಾಡಲು ಕೋರಿ ಕಳುಹಿಸಿದ ಅರ್ಜಿಯನ್ನು **ನಿಪಿ 5** ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ **5(ಎ)** ಎಂದು ಗುರುತಿಸಲಾಯಿತು.

4) ದಿನಾಂಕ 25.02.2021 ರ ಆರ್.ಎಫ್.ಎಸ್.ಎಲ್ ವರದಿಯನ್ನು **ನಿಪಿ 6** ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ 6(ಎ)** ಎಂದು ಗುರುತಿಸಲಾಯಿತು.

ಆರೋಪಿಯ ವಿರುದ್ದ ಸಾಕಷ್ಟುಗಳು ಪುರಾವೆಗಳು ಸಿಕ್ಕ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಶ್ರೀ. ಜಿ.ಜಿ.ಆರ್ ರವರಿಂದ.**

ಚಾಸಾ 1 ರವರು ದಿನಾಂಕ 21.01.2021 ರಂದು 9 ಗಂಟೆಗೆ ದೂರು ನೀಡಿರುತ್ತಾರೆ. ಚಾಸಾ 1 ರವರಿಂದ ಪಡೆದ Original choice Deluxe Whisky ಒಟ್ಟು 24 ಪ್ಯಾಕೇಟ್ ಗಳು, ಮತ್ತು 180 ಎಂ ಎಲ್ ನ 3 Old Tavern old whisky packets ಗಳು ಯಾವ ದಿನಾಂಕದಂದು ತಯಾರಿಸಲಾಗಿದೆ ಎಂಬುದರ ವಿವರವಾಗಿ ನೋಡಿರುವಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ದೂರು ಮತ್ತು ಮುದ್ದೆಮಾಲುಗಳನ್ನು ಪಡೆದಾಗ ಅಬಕಾರಿ ಇಲಾಖೆಯವರಿಗೆ ನಾನು ವಿಚಾರವಾಗಿ ತಿಳಿಸಿರುವುದಿಲ್ಲ. ಘಟನೆಯಾಗಿದೆ ಎಂದು ಹೇಳುತ್ತಿರುವ ಅಂಗಡಿಯು ಸುಮಾರು ಎಷ್ಟು ವಿಸ್ತೀರ್ಣದಲ್ಲಿರುತ್ತದೆ ಎಂದು ಸಾಕ್ಷಿದಾರರಿಂದ ಮಾಹಿತಿ ಪಡೆದಿರುತ್ತೀರಿ ಎಂದರೆ ಸಾಕ್ಷಿಯು ಆ ಅಂಗಡಿಯು ಸುಮಾರು 5 X 5 ಅಡಿ ವಿಸ್ತೀರ್ಣದಲ್ಲಿ ಇರುತ್ತದೆ ಎಂಬ ಮಾಹಿತಿಯನ್ನು ಪಡೆದಿರುತ್ತೇನೆ. ಸದರಿ ಅಂಗಡಿಯು 5 X 5 ಅಡಿ ವಿಸ್ತೀರ್ಣದಲ್ಲಿ ಇರುತ್ತದೆ ಎಂದು ಸಾಕ್ಷಿದಾರರು ಅವರ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಸದರಿ ಅಂಗಡಿಯು ಯಾವ ನಾಮಫಲಕದಲ್ಲಿತ್ತು ಎಂಬ ವಿಚಾರವನ್ನು ಚಾಸಾ 1 ರವರಿಂದ ನಾನು ಪಡೆದಿರುವುದಿಲ್ಲ. ಘಟನೆಯಾಗಿದೆ ಎನ್ನುತ್ತಿರುವ ಅಂಗಡಿಯು ದಿನೇಶ ಎಂಬುವರ ಮಾಲೀಕತ್ವದಲ್ಲಿರುತ್ತದೆ. ಸದರಿ ವಿಚಾರವು ಸಾಕ್ಷಿದಾರರ ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಪಿರ್ಯಾದುದಾರರ ಅವರ ದೂರಿನಲ್ಲಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 1 ರವರು ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ 1 ರವರು ನೀಡಿರುವ ಸುಳ್ಳು ದೂರಿನ ಮೇಲೆ ನಾನು ಅವರ ನಿರ್ದೇಶನದ ಪ್ರಕಾರ

ಸುಳ್ಳು ಪ್ರ ವ ವ ವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ತನಿಖೆ ಮಾಡದೇ ಸಹ ನಾನು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**

**ಅರಕಲಗೂಡು**